<u>ಅಸಲು ದಾವಾ ಸಂಖ್ಯೆ: **157/2025**</u> ಡಿ.ಡಬ್ಲ್ಯೂ.:- **1**

ದಿನಾಂಕ: **24-03-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಮನೆಯನ್ನು ಕಟ್ಟುವ ಸಲುವಾಗಿ ವಾದಿಯ ಬ್ಯಾಂಕಿನಿಂದ ರೂ.2,97,000/- ಹಣವನ್ನು ಸಾಲವಾಗಿ ಪಡೆದದುಕೊಂಡಿದ್ದು ಆ ಸಂಬಂಧವಾಗಿ ಈ ದಾವೆಯನ್ನು ಸಲ್ಲಿಸಿದ್ದಾರೆ. ಸಾಕ್ಷಿಯು ಮುಂದುವರೆದು ನಾನು ಈಗಾಗಲೇ ವಾದಿಯ ಬ್ಯಾಂಕಿಗೆ ರೂ.2,01,000/- ಹಣವನ್ನು ಮರುಪಾವತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ವಾದಿಯ ಬ್ಯಾಂಕಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಡಮಾನ ಪತ್ರವನ್ನು ಬರೆದುಕೊಟ್ಟಿರುತ್ತೇನೆ. ನಾನು ವಾದಿಯ ಬ್ಯಾಂಕಿನಿಂದ ಈ ಮೊದಲು ರೂ.12,00,000/- ಹಣವನ್ನು ಮನೆಯನ್ನು ಕಟ್ಟುವ ಸಲುವಾಗಿ ಪಡೆದುಕೊಂಡಿದ್ದೆನು. ಪ್ರಸ್ತುತ ದಾವೆಯ ಸಾಲದ ಹಣವನ್ನು ಗೃಹ ಬಳಕೆಯ ಉದ್ದೇಶಕ್ಕಾಗಿ ಪಡೆದುಕೊಂಡಿರುತ್ತೇನೆ. ವಾದಿಯ ಬ್ಯಾಂಕಿನಿಂದ ರೂ.12,00,000/- ಮತ್ತು ರೂ.2,97,000/- ಸಾಲದ ಹಣವನ್ನು ಹೊರತುಪಡಿಸಿ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಯ ಬ್ಯಾಂಕಿನವರು ನನಗೆ ನೀಡಿದ ನೋಟೀಸನ್ನು ಪಡೆದುಕೊಂಡಿರುತ್ತೇನೆ. ವಾದಿಯ ಬ್ಯಾಂಕಿನವರು ನೀಡಿದ ನೋಟೀಸಿಗೆ ನಾನು ವಕೀಲರ ಮೂಲಕ ಪ್ರತ್ಯುತ್ತರವನ್ನು ಕೊಟ್ಟಿದ್ದೇನೆ ಎಂದರೆ ಸರಿ. ನಾನು ನೀಡಿದ ಪ್ರತ್ಯುತ್ತರದಲ್ಲಿ ಮನೆಯನ್ನು ಕಟ್ಟುವ ಸಲುವಾಗಿ ಪಡೆದುಕೊಂಡಿರುವ ಸಾಲ ಅಲ್ಲದೇ ಇನ್ನೊಂದು ಸಾಲವನ್ನು ವಾದಿಯ ಬ್ಯಾಂಕಿನಿಂದ ಪಡೆದುಕೊಂಡಿರುವ ಸಾಲದ ಬಗ್ಗೆ ನಮೂದಾಗಿದೆ ಎಂದರೆ ಸರಿಯಲ್ಲ. ನಾನು ವಾದಿಯ ಬ್ಯಾಂಕಿನಿಂದ ಬಂಗಾರವನ್ನು ಅಡವಿಟ್ಟು ರೂ.45,000/- ಹಣವನ್ನು ಪಡೆದುಕೊಂಡಿರುತ್ತೇನೆ ತದನಂತರ ಸದರಿ ಹಣವನ್ನು ಮರುಪಾವತಿ ಮಾಡದೇ ಇದ್ದ ಕಾರಣ ಬ್ಯಾಂಕಿನವರು ಸದರಿ ಬಂಗಾರವನ್ನು ಹರಾಜು ಮಾಡಿ ನಾನು ಬಂಗಾರವನ್ನು ಅಡವಿಟ್ಟ ಸಾಲಕ್ಕೆ ಜಮಾ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಬಂಗಾರವನ್ನು ಅಡವಿಟ್ಟು ರೂ.45,000/- ಹಣವನ್ನು ಪಡೆದುಕೊಂಡಿದ್ದು ಸದರಿ ಹಣವನ್ನು ಸಹ ನಾನು ಮನೆಯನ್ನು ಕಟ್ಟುವ ಸಲುವಾಗಿ ಪಡೆದುಕೊಂಡಿದ್ದ ಸಾಲಕ್ಕೆ ಮರುಪಾವತಿ ಮಾಡಿದ್ದೇನೆ ಎಂದು

ನುಡಿಯುತ್ತಾರೆ. ನಾನು ವಾದಿಯ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಳ್ಳುವ ಸಮಯದಲ್ಲಿ ನನಗೆ ಸೇರಿದ 50 ಇಂಟು 60 ಅಡಿ ಜಾಗದ ಆಸ್ತಿಯನ್ನು ಅಡಮಾನ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ವಾದಿಯ ಬ್ಯಾಂಕಿಗೆ ಅಡಮಾನ ಮಾಡಿದ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ನೀಲಕ್ಕರ ಬಸವರಾಜಪ್ಪ, ಪಶ್ಚಿಮಕ್ಕೆ ಶಾರದಮ್ಮರವರ ಜಾಗ, ಉತ್ತರಕ್ಕೆ ಶೇಖರಪ್ಪರವರ ಜಾಗ, ದಕ್ಷಿಣಕ್ಕೆ conservancy road. ನಾನು ಅಡಮಾನ ಮಾಡಿಕೊಟ್ಟ ಆಸ್ತಿಯ ಉತ್ತರ ದಿಕ್ಕಿನಲ್ಲಿರುವ ಜಾಗದ ಮಾಲೀಕರು ಶೇಖರಪ್ಪ ಅಂದರೆ ನಮ್ಮ ತಂದೆ. ನಾನು ಅಡಮಾನ ಮಾಡಿದ ಆಸ್ತಿಯ ಉತ್ತರ ದಿಕ್ಕಿಗೆ ನನ್ನ ತಂದೆ ಶೇಖರಪ್ಪರವರಿಗೆ ಸೇರಿದ ಮನೆ ಇರುತ್ತದೆ. ನಮ್ಮ ತಂದೆಯ ಮನೆಯ ಚಕ್ಕುಬಂಧಿ  ಪೂರ್ವಕ್ಕೆ ನೀಲಕ್ಕರ ಬಸವರಾಜಪ್ಪ, ಪಶ್ಚಿಮಕ್ಕೆ ಶಾರದಮ್ಮರವರ ಜಾಗ, ಉತ್ತರಕ್ಕೆ ಗ್ರಾಮ ಪಂಚಾಯಿತಿ ರಸ್ತೆ, ದಕ್ಷಿಣಕ್ಕೆ  ನನಗೆ ಸೇರಿದ ಜಾಗ. ನಾನು ಅಡಮಾನ ಮಾಡಿದ ಆಸ್ತಿ ನನ್ನ ತಂದೆಯಿಂದ ಭಾಗಾಂಶದ ಮೂಲಕ ಪಡೆದುಕೊಂಡಿರುತ್ತೇನೆ. ದಾವಾ ಆಸ್ತಿಯನ್ನು ನಾನು ನೋಂದಣಿ ಭಾಗಾಂಶದ ಮೂಲಕ ಪಡೆದುಕೊಂಡಿರುತ್ತೇನೆ. ಸದರಿ ನೋಂದಣಿ ಭಾಗಾಂಶದ ಪತ್ರವನ್ನು ಬ್ಯಾಂಕಿನವರಿಗೆ ಸಾಲವನ್ನು ಪಡೆದುಕೊಳ್ಳುವ ಸಮಯದಲ್ಲಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಸೇರಿದ ಆಸ್ತಿಯಲ್ಲಿ ಒಂದು ಮನೆ ಮತ್ತು ನಮ್ಮ ತಂದೆಗೆ ಸೇರಿದ ಆಸ್ತಿಯಲ್ಲಿ ಒಂದು ಮನೆ ಇರುತ್ತವೆ. ನನ್ನ ಮತ್ತು ನನ್ನ ತಂದೆಗೆ ಸೇರಿದ ಮನೆಗಳ ಮಧ್ಯದಲ್ಲಿ ಖಾಲಿ ಜಾಗ ಇರುವುದಿಲ್ಲ. ದಾವಾ ಆಸ್ತಿಯನ್ನು ನ್ಯಾಯಾಲಯದ ಕೋರ್ಟ್ ಕಮೀಷನರ್ ಮೂಲಕ ತನಿಖೆ ಮಾಡಿ ವರದಿ ಸಲ್ಲಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಸುಮಾರು 3 ಎಕರೆ ಜಮೀನು ಇರುತ್ತದೆ. ನಮ್ಮ ತಂದೆ ಜೀವಿತ ಕಾಲದಲ್ಲಿ ನಮಗೆ ಸೇರಿದ 3 ಎಕರೆ ಜಮೀನಿನ ಮೇಲೆ ನಾನು ಮತ್ತು ನನ್ನ ತಂದೆಯವರು ವಾದಿಯ ಬ್ಯಾಂಕಿನಲ್ಲಿ ರೂ.2,00,000/- ಸಾಲವನ್ನು ಪಡೆದುಕೊಂಡಿದ್ದರು ನಾನು ಸದರಿ ಸಾಲದ ಹಣದ ಜೊತೆಯಲ್ಲಿ ರೂ.2,50,000/- ಬಡ್ಡಿ ಹಣದ ಸಹಿತ ರೂ.4,50,000/- ಹಣವನ್ನು ಮರುಪಾವತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿನಲ್ಲಿ ಬೆಳೆ ಸಾಲಕ್ಕಾಗಿ ರೂ.10,00,000/- ಸಾಲದ ಹಣವನ್ನು ಕೊಡುತ್ತೇವೆ ಎಂದು ತಿಳಿಸಿದ್ದು ಮತ್ತು ಸದರಿ ಬ್ಯಾಂಕಿನವರು ಬೇರೆ ಯಾವುದೇ ಬ್ಯಾಂಕಿನಲ್ಲಿ ಸಾಲವನ್ನು ಪಡೆದುಕೊಂಡಿರಬಾರದು ಎಂದು ತಿಳಿಸಿದ ಮೇರೆಗೆ ಖಾಸಗಿ ವ್ಯಕ್ತಿಗಳಿಂದ ರು.4,50,000/- ಹಣವನ್ನು ಸಾಲವಾಗಿ ಪಡೆದುಕೊಂಡು ಅದನ್ನು ವಾದಿಯ ಬ್ಯಾಂಕಿನವರಿಗೆ ಪಾವತಿ ಮಾಡಿ ನಂತರ ದಾಖಲಾತಿಗಳನ್ನು ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿಗೆ ಹಾಜರುಪಡಿಸಿದ್ದು ಆದರೆ ಬ್ಯಾಂಕಿನವರು ನಮಗೆ ಸಾಲವನ್ನು ಕೊಡದೇ ಮೋಸ ಮಾಡಿರುತ್ತಾರೆ. ನಾನು ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿಗೆ

ಒಂದು ಸಲ ಅಡಮಾನ ಪತ್ರವನ್ನು ಬರೆದುಕೊಟ್ಟಿರುತ್ತೇನೆ. ನಾನು ಮತ್ತು ನನ್ನ ಅಕ್ಕ ಇಬ್ಬರು ಸೇರಿ ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿಗೆ ಅಡಮಾನ ಮಾಡಿಕೊಟ್ಟಿರುತ್ತೇವೆ. ನಾನು, ನನ್ನ ತಂದೆ ಮತ್ತು ನನ್ನ ಅಕ್ಕ ಮೂರು ಜನ ಸೇರಿ ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿಗೆ 2 ಬಾರಿ ಅಡಮಾನ ಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದರೆ ನನಗೆ ನೆನಪಿಲ್ಲ. ದಿಃ 15-02-2017 ರಂದು ನಾನು, ನನ್ನ ಅಕ್ಕ ಮತ್ತು ನನ್ನ ತಂದೆ 3 ಜನ ಸೇರಿ ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿಗೆ ರೂ.13,00,000/- ಕ್ಕೆ ಅಡಮಾನ ಪತ್ರವನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿ. ದಿಃ 02-11-2017 ರಂದು ನಾನು, ನನ್ನ ಅಕ್ಕ ಮತ್ತು ನನ್ನ ತಂದೆ 3 ಜನ ಸೇರಿ ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿಗೆ ರೂ.8,00,000/- ಕ್ಕೆ ಅಡಮಾನ ಪತ್ರವನ್ನು ಬರೆದುಕೊಟ್ಟಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಕ್ಕ ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ಹೊರತುಪಡಿಸಿ ಪ್ರಸ್ತುತ ದಾವೆಯ ದಾವಾ ಆಸ್ತಿ ಮತ್ತು ನಮ್ಮ ತಂದೆಗೆ ಸೇರಿದ ಮನೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸರ್ವೇ ನಂ.86/8 ರಲ್ಲಿರುವ 1 ಎಕರೆ 17 ಗುಂಟೆ, ಸರ್ವೇ ನಂ.22/2 ಬಿ ರಲ್ಲಿರುವ 1 ಎಕರೆ 18 ಗುಂಟೆ ಜಮೀನುಗಳು ನಿಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಿಡಿ-1 ರಿಂದ 3 ದಾಖಲೆಗಳು ನನ್ನ ಅಕ್ಕ ನನ್ನ ಮತ್ತು ನನ್ನ ತಾಯಿಯ ವಿರುದ್ಧ ಸ್ವತ್ತಿನ ನಂ.37 ಮತ್ತು 37/1 ರ ಆಸ್ತಿಗೆ ಸಂಬಂಧಪಟ್ಟಂತೆ ಸಲ್ಲಿಸಿದ ದಾವೆಗೆ ಸಂಬಂಧಿಸಿದ ದಾಖಲಾತಿಗಳು ಎಂದರೆ ಸರಿ. ನನ್ನ ಅಕ್ಕ ವಕೀಲರ ಮೂಲಕ ವಾದಿಯ ಬ್ಯಾಂಕಿಗೆ ನೋಟೀಸನ್ನು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ ದಾವಾ ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ನಿರ್ಬಂಧಕಾಜ್ಞೆಯ ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯ ಬ್ಯಾಂಕಿನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಮ್ಮ ಅಕ್ಕ ವಾದಿಯ ಬ್ಯಾಂಕಿನವರಿಗೆ ವಕೀಲರ ಮೂಲಕ ನೀಡಿದ ನೋಟೀಸಿನಲ್ಲಿ ಅಸಲು ದಾವಾ ಸಂ.124/2025 ರ ಬದಲಾಗಿ ಅಸಲು ದಾವಾ ಸಂ.137/2025 ಎಂದು ನಮೂದು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಸದರಿ ನೋಟೀಸನ್ನು ತೋರಿಸಿ ಸದರಿ ನೋಟೀಸಿನಲ್ಲಿ ಅಸಲು ದಾವಾ ಸಂ.137/2025 ಎಂದು ನಮೂದಾಗಿದೆ ಎಂದರೆ ಸರಿ. ನನ್ನ ಅಕ್ಕ ಅಸಲು ದಾವಾ ಸಂ.124/2025 ರ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಊರಿನಲ್ಲಿ ಪಂಚಾಯಿತಿ ಮಾಡಿ ನಮ್ಮ ಕುಟುಂಬದ ಜಮೀನನ್ನು ನಮ್ಮ ತಾಯಿ ಮತ್ತು ನಮ್ಮ ಅಕ್ಕನಿಗೆ ಬಿಟ್ಟುಕೊಟ್ಟಿರುತ್ತೇವೆ ಆದ ಕಾರಣ ಸದರಿ ಜಮೀನನ್ನು ಅಸಲು ದಾವಾ ಸಂ.124/2025 ರಲ್ಲಿ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲ್ಕಂಡ ವಿಚಾರವನ್ನು ನನ್ನ ಪ್ರತ್ಯುತ್ತರದಲ್ಲಾಗಲೀ ಅಥವಾ ನನ್ನ ತಕರಾರಿನಲ್ಲಾಗಲೀ ನಮೂದು ಮಾಡಿಲ್ಲ

ಎಂದರೆ ಸರಿ. ಪಂಚಾಯಿತಿಯಲ್ಲಿ ಜಮೀನನ್ನು ನನ್ನ ಅಕ್ಕ ಮತ್ತು ನನ್ನ ತಾಯಿಗೆ ಕೊಟ್ಟ ಬಗ್ಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಶಿವಮೊಗ್ಗದ ಕಾರ್ಪೊರೇಷನ್ ಬ್ಯಾಂಕಿನಲ್ಲಿ ಸಾಲದ ವಿಚಾರದಲ್ಲಿ ನನಗೆ ಮೋಸ ಮಾಡಿದ ಬಗ್ಗೆ ಮತ್ತು ನನ್ನ ಹೆಂಡತಿ ನನ್ನ ವಿರುದ್ಧ ಜೀವನಾಂಶದ ಪ್ರಕರಣವನ್ನು ಸಲ್ಲಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಅಕ್ಕ ಮತ್ತು ನನ್ನ ತಾಯಿ 3 ಜನ ಶಾಮೀಲಾಗಿ ಅಸಲು ದಾವಾ ಸಂ.124/2025 ರ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿನಿಂದ ಮನೆಯನ್ನು ಕಟ್ಟುವ ಸಲುವಾಗಿ ಸಾಲವನ್ನು ಪಡೆದುಕೊಂಡ ನಂತರ ಮನೆಯನ್ನು ಕಟ್ಟದೇ ಮತ್ತು ಸಾಲವನ್ನು ಮರುಪಾವತಿ ಮಾಡದೇ ವಾದಿಯ ಬ್ಯಾಂಕಿಗೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಬ್ಯಾಂಕಿನಿಂದ ನಾನು ಮನೆಯ ಪೀಠೋಪಕರಣಗಳನ್ನು ಮಾಡಿಸುವ ಸಲುವಾಗಿ ಹೆಚ್ಚುವರಿ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಮುಂದುವರೆದು ರೂ.2,97,000/- ಹೆಚ್ಚುವರಿಯಾಗಿ ಸಾಲವನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ನಾನು ವಾದಿಯ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಳ್ಳುವ ಸಮಯದಲ್ಲಿ ವಾದಿಯ ಬ್ಯಾಂಕಿಗೆ ಮಾಹೆಯಾನ 9.85 ಹಣವನ್ನು ಬಡ್ಡಿ ರೂಪದಲ್ಲಿ ಕೊಡಬೇಕು ಎಂದು ಒಪ್ಪಂದವಾಗಿತ್ತು ಎಂದರೆ ಸರಿಯಲ್ಲ. ವಾದಿಯ ಬ್ಯಾಂಕಿಗೆ ಹಣವನು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದಿದ್ದರೆ ಹೆಚ್ಚುವರಿಯಾಗಿ ಶೇ.2 ರಷ್ಟು ಬಡ್ಡಿಯನ್ನು ಪಾವತಿ ಮಾಡಬೇಕು ಎಂದರೆ ಸರಿಯಲ್ಲ. ವಾದಿಯ ಬ್ಯಾಂಕಿಗೆ ರೂ.2,01,000/- ಹಣವನ್ನು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಕಟ್ಟಿದ್ದೀರಿ ಎಂದರೆ ಸರಿ. ನಾನು ವಾದಿಯ ಬ್ಯಾಂಕಿಗೆ ರೂ.2,32,189/- ಜೊತೆಗೆ 11.85 ಶೇಕಡಾ ಬಡ್ಡಿಯನ್ನು ಪಾವತಿ ಮಾಡಲು ಬಾಧ್ಯಸ್ಥನು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**